**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಕ್ರಿ ಮಿಸ್ 170/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿ ಡಬ್ಲ್ಯೂ.01**

**ದಿನಾಂಕಃ 20.02.2025**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು ಡಿ.ಎಡ್ ಪಧವೀದರೆ. ನಾನು ಎದುರುದಾರರ ವಿರುದ್ಧ ದಾವಣಗೆರೆ ಕೌಟುಂಬಿಕ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಕ್ರಿ ಮಿಸ್ ನಂ. 448/2018 ಎಂದರೆ ಸರಿ. ಸದರಿ ಅರ್ಜಿ ನಾನು ಎರಡನೇ ಎಂದು ವಜಾ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಹಾಜರಾಗದೇ ಇದ್ದ ಕಾರಣ ವಜಾ ಆಗಿದೆ ಎಂದು ನುಡಿಯುತ್ತಾರೆ. ನನ್ನ ಮತ್ತು ಎದುರುದಾರರ ಮದುವೆ ದಿನಾಂಕ 21.05.2017 ರಂದು ಆಗಿರುತ್ತದೆ. ದಿಃ 08.01.2017 ರಂದು ಎದುರುದಾರರು ಮದುವೆ ರುಕ್ಷಾನಾ ಬೇಗಂ ರವರೊಂದಿಗೆ ಮದುವೆ ಆಗಿದೆ ಎಂದರೆ ಸರಿಯಲ್ಲ. ಸದರಿ ರುಕ್ಷಾನಾ ಬೇಗಂ ಗದಗ ನ್ಯಾಯಾಲಯದಲ್ಲಿ ಎದುರುದಾರನ ವಿರುದ್ಧ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಬರುತ್ತದೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಗದಗ ನ್ಯಾಯಾಲಯದಲ್ಲಿ ದಾಖಲಿಸಿದ ಕ್ರಿ ಮಿಸ್ 182/2018 ರ ಆದೇಶದ ದೃಡೀಕೃತ ನಕಲು ಆಗಿದ್ದು ಅದರಲ್ಲಿ 3,000/- ರೂ ಹಣ ಅವರಿಗೆ ನೀಡಬೇಕು ಎಂದು ಆದೇಶವಾಗಿದೆ ಎಂದರೆ ಸಾಕ್ಷಿಯು ಸದರಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಎದುರುದಾರರು ನನ್ನ ವಿರುದ್ಧ ಲಕ್ಷ್ಮೇಶ್ವರ ನ್ಯಾಯಾಲಯದಲ್ಲಿ ಎಂ ಸಿ 55/2024 ರಡಿ ವಿವಾಹ ಪುನರ್ ಪ್ರಾಪ್ತಿಗೋಸ್ಕರ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ.20 ರಿಂದ ನಿಪಿ.26 ಮತ್ತು 28 ಗಳು ಜಿ ಎಸ್ ಟಿ ರಶೀದಿಗಳು ಅಲ್ಲ ಕೇವಲ ಎಸ್ಟಿಮಿಷನ್ ಗಳು ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು ನನ್ನ ತಾಯಿ  ಇದ್ದೇವೆ. ನನ್ನ ತಾಯಿ ಮನೆಯಲ್ಲಿ ಇರುತ್ತಾರೆ. ಮದುವೆ ಕಾಲಕ್ಕೆ ಎದುರುದಾರರಿಗೆ 1,50,000/- ರೂ ಹಣ ನೀಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ನೀಡಿರುವ ಸಾಮಾನುಗಳ ಬಗ್ಗೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಬಗ್ಗೆ ದಾಖಲೆ ಇದೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ನಾನು ಎದುರುದಾರರೊಂದಿಗೆ ಕೇವಲ 3 ದಿನ ಜೀವನ ಮಾಡಿದ್ದೇನೆ ಎಂದರೆ ಸರಿಯಲ್ಲ.

ಸಾವಿಬಾಯಿ ಎಂದರೆ ನನ್ನ ತಾಯಿ. ಶಾಂತಾ ಬಾಯಿ ನನ್ನ ತಾಯಿಯ ತಂಗಿ. ಮಂಜುನಾಯ್ಕ ರವರು ಹೊರಗಿನವರು. ನಮ್ಮ ಮದುವೆ ಕಾಲಕ್ಕೆ ಹಾಜರಿದ್ದರು. ಸದರಿಯವರು ನಮ್ಮ ಸಂಬಂಧಿಕರಲ್ಲ. ಬೇಗಂ ನನ್ನ  ಮನೆಯ ಪಕ್ಕದವರು.

ಕ್ರಿ ಮಿಸ್ 448/2018 ರಲ್ಲಿ ನಾನು ಎದುರುದಾರನ 2 ನೇ ಹೆಂಡತಿ ಎಂದು ನನ್ನ ಅರ್ಜಿ ವಜಾ ಆಗಿದ್ದರೂ ಸಹ ತದನಂತರದಲ್ಲಿ ಪ್ರಸ್ತುತ ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ ಎಂದರೆ

ಸರಿಯಲ್ಲ. ಮದುವೆಯಾಗಿ 2 ತಿಂಗಳ ಕಾಲ ಚೆನ್ನಾಗಿ ಜೀವನ ಮಾಡಿರುತ್ತೇವೆ. ಎದುರುದಾರರು 4 ಲಕ್ಷ ರೂ ವರದಕ್ಷಿಣೆ ಕೇಳಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ರೀತಿಯ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿಲ್ಲ ಎಂದರೆ ಸರಿಯಲ್ಲ. ಗದಗ ನ್ಯಾಯಾಲಯ ಮತ್ತು ಲಕ್ಷ್ಮೇಶ್ವರ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳ ಬಗ್ಗೆ ಮಾಹಿತಿ ಇದ್ದರೂ ಸಹ ಈ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ